ನೂಕ್ತ ಕಾರ್ಯಕ್ರಮ ತೆಗೆದುಕೊಳ್ಳುತ್ತೇವೆ. ಇನ್ನು ರೈತರಿಗೆ ವ್ಯವಸಾಯಕ್ಕೆ ಅನಾನುಕೂಲ ವಾಗದಂತೆ ಕಾಮಗಾರಿಗಳ ಬಗ್ಗೆ ಸಂಬಂಧಪಟ್ಟ ಇಂಜನಿಯರಿಗೆ ಮತ್ತು ಡೆಪ್ಯೂಟಿ ಕಮೀಷನರಿಗೆ ನೂಕ್ತ ಕ್ರಮ ತೆಗೆದುಕೊಳ್ಳುವುದಕ್ಕೆ ಏರ್ಪಾಡು ಮಾಡಿದ್ದೇವೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಸ್ವಾಮಿ, ಅನೇಕ ಯೋಜನೆಗಳು ತಯಾರಾಗಿವೆ ಎಂದು ಈಗ ತಾನೇ ಉತ್ತರ ಕೊಟ್ಟಿದ್ದೀರಿ. ಈ ಯೋಜನೆಗಳನ್ನು ತೆಗೆದುಕೊಂಡು ಯಾವಾಗ ಮುಗಿಸುತ್ತೀರಿ ? ಇದಕ್ಕೆ ಒಂದು ನಿರ್ದಿಷ್ಟವಾದ ಕಾಲವನ್ನು ಹೇಳುವುದಕ್ಕೆ ಸಾಧ್ಯವೇ ?

ಶ್ರೀ ಬಿ. ಎಂ. ಪಾಟೀಲ್.—ಈಗಾಗಲೇ ಮಾನ್ಯ ಸದಸ್ಯರಿಗೆ ತಿಳಿಸಿದ್ದೇನೆ ಅದು ತೀವ್ರ ಪರಿಶೀಲನೆಯಲ್ಲಿದೆ ಎಂದು. ಪುರಸಭೆಯವರು ತಮ್ಮ ಪಾಲಿನ ಕರ್ತವ್ಯ ಮಾಡಿದರೆ ಸರ್ಕಾರ ದವರೂ ಕೂಡ ಆ ಯೋಜನೆಯನ್ನು ಮಂಜೂರಾತಿ ಮಾಡುವ ವಿಷಯದಲ್ಲಿ ತೀವ್ರ ಕಾರ್ಯಕ್ರಮ ತೆಗೆದುಕೊಳ್ಳುತ್ತಾರೆ.

ಶ್ರೀ ಬಿ. ಪಿ. ಗಂಗಾಧರ್.—ಸ್ವಾಮಿ, ಚಿತ್ರದುರ್ಗ, ದಾವಣಗೆರೆ, ಹರಿಹರ ಈ ಕಡೆಗಳಲ್ಲಿ ವಾಟರ್ ಸಪ್ಲೈ, ಅಂಡರ್‌ಗ್ರೌಂಡ್ ಡ್ರೈನೇಜ್ ಈ ಸ್ಕೀಮುಗಳನ್ನು ತೆಗೆದುಕೊಂಡು ಸುವ್ಯವಸ್ಥೆ ಯಿಂದ ಮಾಡಿದ್ದಾರೆ. ಆದರೆ ತುಮಕೂರಿನಲ್ಲಿ ವಿರೋಧ ಪಕ್ಷದ ಸದಸ್ಯರು ಇದ್ದಾರೆಂದು ಅಲ್ಲಿ ಕಾಂಗ್ರೆಸ್ ಪಕ್ಷದ ಸದಸ್ಯರು ಯಾರೂ ಇಲ್ಲವೇಂದು ಈರೀತಿ ವಿಧಾನ ಮಾಡಿದ್ದೀರಾ ? ಇಲ್ಲದಿದ್ದರೆ ಇನ್ನು ಒಂದು ವರ್ಷದೊಳಗಾದರೂ ಈ ಯೋಜನೆಯನ್ನು ಕಾರ್ಯಗತ ಮಾಡಿಕೊಡುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಬಿ. ಎಂ. ಪಾಟೀಲ್.—ಯಾವುದಾದರೂ ಒಂದು ಯೋಜನೆಯನ್ನು ಕಾರ್ಯಗತ ಮಾಡ ಬೇಕಾದರೆ ಅಲ್ಲಿ ವಿರೋಧ ಪಕ್ಷವೇ ಇರಲಿ, ಯಾವ ಪಕ್ಷವೇ ಇರಲಿ ಅದನ್ನು ಗಣನೆಗೆ ತೆಗೆದುಕೊಳ್ಳು ವುದಿಲ್ಲ. ಅಲ್ಲಿಯ ಆರ್ಥಿಕ ಪರಿಸ್ಥಿತಿ ನೋಡಿಕೊಂಡು ಅದಕ್ಕನುಗುಣವಾಗಿ ಮಾಡುತ್ತೇವೆ. ದಾವಣಗೆರೆ, ಚಿತ್ರದುರ್ಗ, ಹರಿಹರ, ಮೈಸೂರು ಈ ಕಡೆಗಳಲ್ಲಿ ಅಲ್ಲಲ್ಲಿ ವಿರೋಧಪಕ್ಷದವರು ಇದ್ದರೂ ಕೂಡ ಈ ಯೋಜನೆಗಳನ್ನು ತೆಗೆದುಕೊಂಡು ಮಾಡಿದ್ದೇವೆ ಎನ್ನುವುದನ್ನು ಮಾನ್ಯ ಸದಸ್ಯರ ಗಮನಕ್ಕೆ ತರುತ್ತೇನೆ.

School for Deaf, Dumb and Blind

124. Sri L. SRIKANTAIAH (Nanjangud).—

Will the Minister for Social Welfare be pleased to state :—

(*a*) whether there is a School for Deaf, Dumb and Blind people in Mysore City and if so, when was this institution started ;

(*b*) the strength that this institution had during the past ten years (yearwise figures for deaf and dumb and blind my be given) ;

(*c*) whether this is Government institutions or run privately under grant-in-aid ;

(*d*) whether the Government is thinking of shifting this institution to Bangalore City with the idea of handing it over to a Missionary management ;

(*e*) whether the All India Institution of Speech and Hearing has made representations to Government to hand over the institution to its control for the purpose of running practical classes and conducting experiments ?

Sri V. L. PATIL (Minister for Social Welfare).—

(*a*) There is a Government School for Deaf and Blind Boys in Mysore City established in the year, 1901.

(*b*) *Vide* statement appended.

(*c*) This is a Government Institution.

(*d*) No.

(*e*) No.

STATEMENT

Sl. No.	Year	Blind		Deaf		Total Strength
		Boys	Girls	Boys	Girls	
1.	1959–60	72	...	64	...	136
2.	1960–61	69	...	72	...	141
3.	1961–62	71	...	63	...	134
4.	1962–63	75	...	75	...	150
5.	1963–64	78	...	70	...	148
6.	1964–65	75	...	73	...	143
7.	1965–66	72	...	73	...	145
8.	1966–67	70	...	65	...	135
9.	1967–68	61	...	69	...	130
10.	1968–69	71	22	77	36	206

ಶ್ರೀ ಎಲ್. ಶ್ರೀಕಂಠಯ್ಯ.— ಸ್ವಾಮಿ, ತಮ್ಮ ಪ್ರವಾಸ ಕಾಲದಲ್ಲಿ ಮೈಸೂರು ನಗರದಲ್ಲಿ ಕಿವುಡರು, ಮೂಕರು ಮತ್ತು ಕುರುಡರಿಗಾಗಿ ಇರುವ ಶಾಲೆಗೆ ಯಾವಾಗಲಾದರೂ ಅಕಸ್ಮಾತ್ ಆಗಿ ಭೇಟಿ ಮಾಡಿದ್ದೀರಾ ?

† ಶ್ರೀ ವಿ. ಎಲ್. ಪಾಟೀಲ್.—ನಾನು ಸರಪ್ರೈಸ್ ವಿಸಿಟ್ ಮಾಡಿಲ್ಲ. ಡೆಪ್ಯೂಟಿ ಮಿನಿಸ್ಟರ್, ಸಂಬಂಧಪಟ್ಟ ಅಧಿಕಾರಿಗಳು ಭೇಟಿ ಮಾಡಿದ್ದಾರೆ.

ಶ್ರೀ ಬಾಪೂಗೌಡ.— ಗುಲ್ಬಾರ್ಗಾದಲ್ಲೂ ಕೂಡ ಇದೇ ತರಹ ಒಂದು ಶಾಲೆ ಇದೆ. ಅಲ್ಲಿ ಪಾಸು ಮಾಡಿಕೊಂಡು ಬಂದ ಹುಡುಗರಿಗೆ ನೌಕರಿಗೇನಾದರೂ ಏರ್ಪಾಡು ಮಾಡಿಕೊಡುತ್ತೀರಾ?

ಶ್ರೀ ವಿ. ಎಲ್. ಪಾಟೀಲ್.—ಇದು ಮೈಸೂರು ನಗರಕ್ಕೆ ಸಂಬಂಧಪಟ್ಟ ಪ್ರಶ್ನೆ. ಅದರ ಬಗ್ಗೆ ಕೇಳಿದರೆ ಹೇಳಬಹುದು.

ಶ್ರೀ ಆಜೀಟ್ ಸೇಟ್.—ಈ ಶಾಲೆಯನ್ನು ಬೆಂಗಳೂರಿಗೆ ಷಿಫ್ಟ್ ಮಾಡಬೇಕು ಎನ್ನುವುದು ಸರ್ಕಾರದ ಯೋಚನೆಯಲ್ಲದೆಯೇ ? ಅದಕ್ಕೆ ಮುನಿಸಿಪಾಲಿಟಿಯವರು ನಾವೇ ಬಿಲ್ಡಿಂಗ್ ಕಟ್ಟಿಸಿ ಕೊಡುತ್ತೇವೆ ಆ ಶಾಲೆ ಇಲ್ಲೇ ಇರಿಸಿಕೊಳ್ಳಬೇಕು ಎಂದು ಪರ್ಸನಲ್ ಆಗಿ ಮನವಿ ಮಾಡಿಕೊಂಡ ಮೇಲೆ ಅದಕ್ಕೆ ಒಪ್ಪಿಕೊಂಡಿದ್ದೀರಿ. ಅವರ ಪ್ರಕಾರ ಮೈಸೂರು ಮುನಿಸಿಪಾಲಿಟಿಯವರು ಕಾಗದ ಬರೆದಿದ್ದಕ್ಕೆ ತಮ್ಮಿಂದ ಬಂದಿಲ್ಲ. ಆದುದರಿಂದ ಅದಕ್ಕೆ ಜವಾಬನ್ನು ಕಳುಹಿಸುವುದಕ್ಕೆ ಏರ್ಪಾಡು ಮಾಡುತ್ತೀರಾ ?

ಶ್ರೀ ವಿ. ಎಲ್. ಪಾಟೀಲ್.—ಈ ವಿಷಯವನ್ನು ಮುನಿಸಿಪಾಲಿಟಿಯವರೊಂದಿಗೆ ಡಿಸ್ಕಸ್ ಮಾಡಿದ ನಂತರ ಸರ್ಕಾರ ಪರಿಶೀಲನೆ ಮಾಡುತ್ತದೆ.

ಶ್ರೀ ಬಿ. ದೊಡ್ಡಬೋರೇಗೌಡ.—ಸ್ವಾಮಿ, ಮೈಸೂರು ನಗರದಲ್ಲಿ 1959-60 ರಲ್ಲಿ ಕಿವುಡರು ಮತ್ತು ಮೂಕರ ಸಂಖ್ಯೆ ಒಟ್ಟು ಸ್ಕೆಂತ್ 136 ಎಂದು ಕೊಟ್ಟಿದ್ದೀರಿ. 1967-68 ರಲ್ಲಿ 130 ಎಂದು ಕೊಟ್ಟಿದ್ದೀರಿ. ಅದರೆ ಮೈಸೂರು ಸ್ಟೇಟ್‌ನಲ್ಲಿ ಈ ತರಹ ಮಕ್ಕಳ ಸಂಖ್ಯೆ ಎಷ್ಟಿದೆ ಎಂಬುದನ್ನು ತಿಳಿಸುತ್ತೀರಾ ?

ಶ್ರೀ ವಿ. ಎಲ್. ಪಾಟೀಲ್.—ಮಾನ್ಯ ಸದಸ್ಯರು ಮೈಸೂರು ನಗರದ ಸಲುವಾಗಿ ಕೇಳಿರುವುದರಿಂದ ಅದರ ಬಗ್ಗೆ ಅಂಕೆಸಂಖ್ಯೆಗಳನ್ನು ಕೊಟ್ಟಿದೆ.

ಶ್ರೀ ಬಿ. ದೊಡ್ಡಬೋರೇಗೌಡ.—ಮೈಸೂರು ನಗರದಲ್ಲಿ ಎಷ್ಟು ವಿದ್ಯಾರ್ಥಿಗಳು ಇದ್ದಾರೋ ಅದರ ಅಂಕೆಸಂಖ್ಯೆ ಕೊಟ್ಟಿದ್ದೀರಿ. ಅದರಲ್ಲಿ ಎಷ್ಟು ಮಕ್ಕಳಿಗೆ ಸಹಾಯ ನೀಡಿದ್ದೀರಾ ಎಂಬುದನ್ನು ಹೇಳುತ್ತೀರಾ ?

ಶ್ರೀ ವಿ. ಎಲ್. ಪಾಟೀಲ್.—ಮಾನ್ಯ ಸದಸ್ಯರು ವಿದ್ಯಾರ್ಥಿಗಳ ಸಂಖ್ಯೆ ಕೇಳಿರುವುದರಿಂದ ಅವನ್ನು ಮಾತ್ರ ಕೊಟ್ಟಿದ್ದೇವೆ. ಪ್ರತ್ಯೇಕ ಪ್ರಶ್ನೆ ಕೇಳಿದರೆ ಬೇರೆ ಹೇಳುತ್ತೇನೆ.

ಶ್ರೀ ಎಲ್. ಶ್ರೀಕಂಠಯ್ಯ.—ಹಿಂದೆ ಈ ಶಾಲೆಯಲ್ಲಿ ನಟರಾಜ್ ಎನ್ನುವವರು ಒಬ್ಬರು ಇದ್ದರು. ಅವರು ಫಾರಿನ್‌ಗೆ ಹೋಗಿ ತರಪೇತು ಪಡೆದುಕೊಂಡು ಬಂದಮೇಲೆ ಎ. ಐ. ಆರ್. ಗೆ ಹೊರಟು ಹೋದರು. ಅವರು ಹೋದಮೇಲೆ ಉತ್ತಮವಾಗಿರುವವರು, ಈ ಶಿಕ್ಷಣಕ್ಕೆ ತರಪೇತು ಕೊಡುವವರು ಯಾರೂ ಇಲ್ಲ. ಇದು ಸರ್ಕಾರದ ಗಮನಕ್ಕೆ ಬಂದಿದೆಯೇ ?

(ಉತ್ತರವಿಲ್ಲ)

Sri G. CHANDRAKANTH.—From the statement appended, it is clear that the number of these deaf, dumb and blind children is increasing. May I know what action is taken by the Government to arrest the growth of such persons ?

ಶ್ರೀ ವಿ. ಎಲ್. ಪಾಟೀಲ್.—ಆರೀತಿ ವಿದ್ಯಾರ್ಥಿಗಳು ಹೆಚ್ಚು ಬಂದರೆ ಸರ್ಕಾರದವರು ಸ್ಕೂಲುಗಳನ್ನು ಹೆಚ್ಚು ಮಾಡುತ್ತಾರೆ.

Sri H. SIDDAVEERAPPA.—It is seen from the statement that only in the year 1968-69 there were deaf and blind girls. Until then there was no one. May I know what happened to the deafness and blindness of girls till then ?

ಶ್ರೀ ವಿ. ಎಲ್. ಪಾಟೀಲ್.—ಮೊದಲು ಅದು ಎಜುಕೇಷನ್ ಡಿಪಾರ್ಟ್‌ಮೆಂಟ್‌ನಲ್ಲಿತ್ತು. 1968-69 ರಲ್ಲಿ ನಮ್ಮ ಡಿಪಾರ್ಟ್‌ಮೆಂಟ್‌ಗೆ ಬಂದಿದೆ. ನಮ್ಮ ಡಿಪಾರ್ಟ್‌ಮೆಂಟಿಗೆ ಬಂದಮೇಲೆ ಅದರ ಅಂಕೆಸಂಖ್ಯೆ ಕೊಟ್ಟಿದೆ.

ಶ್ರೀ ಕೆ. ಎಸ್. ನಾಗರತ್ನಮ್ಮ.—ಇದರಲ್ಲಿರತಕ್ಕಂಥ ಗಂಡುಮಕ್ಕಳು ಮತ್ತು ಹೆಣ್ಣು ಮಕ್ಕಳಿಗೆ ಬೋರ್ಡಿಂಗ್ ಮತ್ತು ಲಾಡ್ಜಿಂಗ್‌ಗೆ ಆಗುತ್ತಾ ಇರುವ ಒಟ್ಟು ಖರ್ಚೆಷ್ಟು ?

ಶ್ರೀ ವಿ. ಎಲ್. ಪಾಟೀಲ್.—ಈಗ ಹೆಣ್ಣುಮಕ್ಕಳಿಗೆ ಮತ್ತು ಗಂಡುಮಕ್ಕಳಿಗೆ ಬೇರೆಬೇರೆ ಹಾಸ್ಟಲ್ ಇದೆ. ಖರ್ಚು ಎಷ್ಟಾಗುತ್ತದೆ ಎಂಬುದರ ಬಗ್ಗೆ ಸಪರೇಟ್ ಪ್ರಶ್ನೆ ಕೇಳಿದರೆ ಕೊಡುತ್ತೇನೆ.

ಶ್ರೀ ಕೆ. ಎಸ್. ನಾಗರತ್ನಮ್ಮ.—ಒಂದೊಂದು ವಿದ್ಯಾರ್ಥಿಗೂ ಎಷ್ಟೆಷ್ಟು ಖರ್ಚಾಗುತ್ತದೆ.

(ಉತ್ತರವಿಲ್ಲ)

Sri D. B. KALMANKAR.—Out of the figures given here, how many are dumb, how many are deaf and how many are blind ?

ಶ್ರೀ ವಿ. ಎಲ್. ಪಾಟೀಲ್.—ತಮಗೆ ಯಾವ ವರ್ಷದ್ದು ಬೇಕು ಎಂದು ಕೇಳಿದರೆ ಹೇಳಬಹುದು. 1968-69 ರಲ್ಲಿ ಇರುವ ಬ್ಲೈಂಡ್ ಸಂಖ್ಯೆಯಲ್ಲಿ ಬಾಯ್ಸ್ 71, ಗರ್ಲ್ಸ್ 22, ಡೀಫ್ ಸಂಖ್ಯೆಯಲ್ಲಿ ಬಾಯ್ಸ್ 77, ಗರ್ಲ್ಸ್ 36, ಒಟ್ಟು 206 ಸ್ಕೆಂತ್ ಇದ್ದಾರೆ.

ಶ್ರೀ ಎಲ್. ಶ್ರೀಕಂಠಯ್ಯ.—ಕೇಂದ್ರ ಸರ್ಕಾರದ ಸಹಾಯ ಪಡೆದ ಆರ್ ಇಂಡಿಯಾ ಇನ್‌ಸ್ಟಿಟ್ಯೂಷನ್ ಆಫ್ ಸ್ಪೀಚ್ ಅಂಡ್ ಹಿಯರಿಂಗ್ ಈ ಸಂಸ್ಥೆಯವರು ಈ ಶಾಲೆಯನ್ನು ತಮ್ಮ ಮೇಲ್ವಿಚಾರಣೆಗೆ ತೆಗೆದುಕೊಳ್ಳುವುದಕ್ಕೆ ರೆಡಿ ಆಗಿರುವುದರಿಂದ ಇದನ್ನು ಅವರ ವಶಕ್ಕೆ ಏತಕ್ಕೆ ಕೊಡಬಾರದು ?

ಶ್ರೀ ವಿ. ಎಲ್. ಪಾಟೀಲ್.—ವಿಚಾರ ಮಾಡಬೇಕು.

Construction of the Earthen Dam Work of Hemavathi Project

127. Sri H. N. NANJE GOWDA (Arkalgud).—

Will the Chief Minister be pleased to refer to replies given by him on 9th September 1969 to the Starred Question No. 349 and state : —

(*a*) the names of the Contractors to whom the work of the construction of the Earthen Dam portion of the 'right and left' banks of the Hemavathy Reservoir Project is entrusted ;

(*b*) whether the said contractors are proceeding with the construction work of the said portion of the dam ;

(*c*) if not, the reasons for such failure on the part of the contractors to proceed with the work ;

(*d*) whether Government is thinking to cancel the contract made with the said contractors and entrust the work to some fresh Contractors ?

Sri VEERENDRA PATIL (Chief Minister).—

(*a*) Right Bank Earth Dam :

(a) Sri M.Marisamappa

(*b*) M/s. Balaji Engineering Works.

Right Bank

Earth Dam : Sri V. C. Khanna.

(*b*) only M/s. Balaji Engineering Co., are doing this work. The other two contractors have stopped their work.

(*c*) (i) Sri V. C. Khanna has stopped the work on the grounds of imbalance of their rates when compared to subsequently accepted rates in the adjoining reaches.

(ii) Sri Marisamappa has stopped the work on the plea that sufficient borrow areas were not made available in time.

(*d*) It is proposed to close the work of these Contractors and take up the balance works departmentally.

Sir, there is a printing mistake in the reply to (*a*). Against Right Bank Earth Dam, I have given the names of the contractors. Again, down below it is printed as Right Bank Earth Dam, but it should have been, "Left Bank Earth Dam".